# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 686 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 12-03-2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆದಾಯ ಪ್ರಮಾಣ ಪತ್ರ ವಿತರಿಸುವ ಪ್ರಾಧಿಕಾರ ಯಾವುದು; ಆದಾಯವನ್ನು ಪ್ರಾಥಮಿಕವಾಗಿ ದೃಢೀಕರಿಸುವ ಅಧಿಕಾರಿ ಮತ್ತು ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಇತರ ಅಧಿಕಾರಿಗಳು ಯಾರು; ಈ ಆದಾಯ ದೃಢೀಕರಣದ ನೈಜತೆ ಮತ್ತು ಪ್ರಸ್ತುತತೆಯನ್ನು ಯಾವ ಆಧಾರದ ಮೇಲೆ ಒಪ್ಪಿ ಅಂತಿಮವಾಗಿ ಆದಾಯ ಪ್ರಮಾಣ ಪತ್ರ ವಿತರಿಸಲಾಗುತ್ತಿದೆ; | ರಾಜ್ಯದಲ್ಲಿ ಆದಾಯ ಪ್ರಮಾಣ ಪತ್ರ ವಿತರಿಸುವ ಪ್ರಾಧಿಕಾರ ತಹಶೀಲ್ದಾರ್ / ಉಪ ತಹಶೀಲ್ದಾರ್‌ರವರಾಗಿರುತ್ತಾರೆ; ಆದಾಯವನ್ನು ಪ್ರಾಥಮಿಕವಾಗಿ ದೃಢೀಕರಿಸುವ ಅಧಿಕಾರಿ ಗ್ರಾಮ ಆಡಳಿತ ಅಧಿಕಾರಿಯವರಾಗಿರುತ್ತಾರೆ; ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಗ್ರಾಮ ಆಡಳಿತ ಅಧಿಕಾರಿ, ರಾಜ ಸ್ವ ನಿರೀಕ್ಷಕರು, ವಿಷಯ ನಿರ್ವಾಹಕರು ಹಾಗೂ ಉಪ ತಹಶೀಲ್ದಾರ್‌ರವರಾಗಿರುತ್ತಾರೆ.<br><br>ಈ ಆದಾಯ ದೃಢೀಕರಣದ ನೈಜತೆ ಮತ್ತು ಪ್ರಸ್ತುತತೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 44 ಎಜಿಎಸ್ 2018, ದಿನಾಂಕ:10.09.2018 ರಲ್ಲಿ ಈ ಕೆಳಕಂಡ ಕಡ್ಡಾಯ ಪ್ರಮಾಣೀಕೃತ ದಾಖಲೆಗಳಾಗಿ ನಿರ್ದಿಷ್ಟ ಪಡಿಸಲಾಗಿದೆ.<br>**ಕಡ್ಡಾಯ ದಾಖಲೆಗಳು:**<br>1. ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್.<br>2. ಅರ್ಜಿ ನಮೂನೆಯಲ್ಲಿ ಸ್ವಯಂ ಘೋಷಿತ ಪತ್ರ<br>**ಐಚ್ಛಿಕ:**<br>1. ವೇತನ ಸ್ಲೀಪ್<br>2. ಆದಾಯ ತೆರಿಗೆ ಪಾವತಿ<br><br>**ಕಾರ್ಯ ವಿಧಾನ:** ಮೇಲ್ಕಂಡ ದಾಖಲೆಗಳೊಂದಿಗೆ ಗ್ರಾಮ ಲೆಕ್ಕಿಗರಿಂದ ಕ್ಷೇತ್ರ ಪರಿಶೀಲನೆ ಮಾಡಿ ಪ್ರಮಾಣ ಪತ್ರ ವಿತರಣೆ ಮಾಡಲಾಗುವುದು. |
| ಆ) | ಕಂದಾಯ ಇಲಾಖೆಯಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಿದ ಎಷ್ಟು ಅರ್ಜಿಗಳನ್ನು ಒಪ್ಪಿ ಪ್ರಮಾಣ ಪತ್ರ ವಿತರಿಸಿದೆ; ತಿರಸ್ಕರಿಸಿದ ಅರ್ಜಿಗಳೆಷ್ಟು; ಅದಕ್ಕೆ ಕಾರಣಗಳೇನು; (ಕಳೆದ 3 ವರ್ಷಗಳ ವಿವರ ನೀಡುವುದು) | ಆದಾಯ ಪ್ರಮಾಣ ಪತ್ರ ಕೋರಿ ಕಳೆದ 3 ವರ್ಷಗಳಲ್ಲಿ ಆನ್‌ಲೈನ್ ಮೂಲಕ 79,62,197 ಅರ್ಜಿಗಳು ಸ್ವೀಕೃತವಾಗಿದ್ದು, ಅದರಲ್ಲಿ 76,55049 ಅರ್ಜಿಗಳನ್ನು ಒಪ್ಪಿ ಪ್ರಮಾಣ ಪತ್ರ ವಿತರಿಸಲಾಗಿರುತ್ತದೆ ಹಾಗೂ 3,05,889 ಅರ್ಜಿಗಳನ್ನು ಅರ್ಜಿದಾರನು ನೀಡಿದ ವಿಳಾಸದಲ್ಲಿ ವಾಸಿಸುತಿಲ್ಲ ಹಾಗೂ ಆದಾಯ ದಾಖಲೆಯನ್ನು ಅಪ್ಲೋಡ್ ಮಾಡಿರುವುದಿಲ್ಲ ಹಾಗೂ ಸದರಿ ದಾಖಲೆಗಳನ್ನು ಸಲ್ಲಿಸುವಂತೆ ತಿಳಿಸಿದಾಗ ನೀಡಿರುವುದಿಲ್ಲ ಎಂಬ ಕಾರಣಕ್ಕಾಗಿ ತಿರಸ್ಕೃತ ಗೊಳಿಸಲಾಗಿರುತ್ತದೆ. ವಿವರವನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |

| | | |
|---|---|---|
| ಇ) | ಸರಕಾರಿ ನಿಯಂತ್ರಣದಲ್ಲಿರಬಹುದಾದ Adhar, PAN card ಹಾಗೂ PF, ESI ಆಧಾರಿತ ವ್ಯವಹಾರಗಳಿಂದಲೇ ವ್ಯಕ್ತಿಯ ವಾರ್ಷಿಕ ಆದಾಯವನ್ನು ಗುರುತಿಸಬಹುದಾಗಿದ್ದರೂ ಈ ಸೌಲಭ್ಯಗಳನ್ನು ಹೊಂದಿ ಬಿಪಿಎಲ್ ಆದಾಯವನ್ನು ಮೀರಿರುವ ಅರ್ಜಿದಾರರಿಗೆ ಬಿಪಿಎಲ್ ಆದಾಯ ಪ್ರಮಾಣ ಪತ್ರಗಳು ವಿತರಣೆಯಾಗಿ ಸರ್ಕಾರದ ಸವಲತ್ತುಗಳು ಅನರ್ಹರಿಗೂ ದೊರಕುತ್ತಿರುವುದು ಕಂಡು ಬಂದಿರುವ ಬಗ್ಗೆ ಏನು ಕ್ರಮವಹಿಸಲಾಗುವುದು; | AJSK- KUTUMBA ಸಂಯೋಜನೆ ವಿನಂತಿ ಅರ್ಜಿಯ ನಮೂನೆ (Integration Request Form) ಪ್ರಕಾರ, ಆದಾಯ ಪ್ರಮಾಣ ಪತ್ರವನ್ನು ನೀಡುವ ವೇಳೆ ಅರ್ಜಿದಾರನ ಆದಾಯವನ್ನು ವಿಶ್ಲೇಷಿಸಲು ಸಂಯೋಜನೆ ತಂತ್ರಾಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳಿಗೆ ಈ ಕೆಳಕಂಡ ಮಾಹಿತಿಯನ್ನು (Decision Support System) KUTUMBA ದತ್ತಾಂಶದಿಂದ ಪಡೆದು ಪ್ರದರ್ಶಿಸಲಾಗುತ್ತಿದೆ.<br>• LAND Extent, CASTE,<br>• OCCUPATION, RESERVATION CATEGORY,<br>• TYPE OF VEHICLE, MNREGA ID<br>• INCOME TAX PAYEE, PROFESSIONAL TAX PAYEE,<br>• GST PAYEE, RATION CARD TYPE,<br>• STATUS OF KUTUMBA ID,<br>ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ (ಆಸು) 28 ಅಸಪ 2024, ದಿನಾಂಕ:03.09.2024 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಅಧ್ಯಕ್ಷತೆಯಲ್ಲಿ ಬಿಪಿಎಲ್ ಆಧಾರಿತ ಯೋಜನೆಗಳ ಬಿಪಿಎಲ್ ಕಾರ್ಡ್‌ಗಳಿಗೆ ಸಂಬಂಧಿಸಿದ ಮಾನದಂಡಗಳನ್ನು ಹಾಗೂ ಆದಾಯ ಧೃಡೀಕರಣ ಪತ್ರಗಳನ್ನು ನೀಡುವ ವಿಧಾನಗಳನ್ನು ಪರಾಮರ್ಶಿಸಲು ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಉಪ ಸಮಿತಿಯು ನೀಡುವ ಸಲಹೆ ಅಭಿಪ್ರಾಯಗಳನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಮತ್ತು ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಎಎವೈ/ಪಿಹೆಚ್‌ಹೆಚ್ ಪಡಿತರ ಚೀಟಿಗಳಿಗೆ ಸಂಬಂಧಿಸಿದ ಮಾನದಂಡಗಳನ್ನು ಹಾಗೂ ಆದಾಯ ಧೃಡೀಕರಣ ಪತ್ರಗಳನ್ನು ನೀಡುವ ವಿಧಾನವನ್ನು ಸುವ್ಯವಸ್ಥಗೊಳಿಸುವ ಕುರಿತು ಸೂಕ್ತ ಪ್ರಸ್ತಾವನೆ ಸ್ವೀಕೃತವಾದಲ್ಲಿ ಕ್ರಮ ಕೈಗೊಳ್ಳಲಾಗುವುದು. |
| ಈ) | ಆದಾಯ ಪ್ರಮಾಣ ಪತ್ರವನ್ನು ವಿತರಿಸಲು ಅಧಿಕಾರ ಹೊಂದಿರುವ ಅಧಿಕಾರಿಗಳಿಗೆ ಅರ್ಜಿದಾರರು ನೀಡಿರುವ ಮಾಹಿತಿಯನ್ನು ತಂತ್ರಾಂಶದ ನೆರವು ಪಡೆದು ಲಿಂಕ್ ಆಗಿರುವ "ಆರ್ಥಿಕ ಹಾಗೂ ಆಸ್ತಿ ಪರಿಕರಗಳ" (Financial & Asset instruments like IT & GST returns, Adhar, PAN, PF, ESI, RC, E-swathu, E-Khata, RTC, etc) ಮೂಲಕ ನೈಜತೆಯನ್ನು ಪರಿಶೀಲಿಸಲು ಯಾಕೆ ಇನ್ನೂ ಸ್ವಯಂಚಾಲಿತ ಅವಕಾಶಗಳನ್ನು ಕಲ್ಪಿಸಲಾಗಿಲ್ಲ; ಯಾವಾಗ ಆದಾಯ ಪ್ರಮಾಣ ಪತ್ರ ಸಹಿತ ಎಲ್ಲಾ ಪ್ರಮಾಣ ಪತ್ರಗಳ ವಿತರಣೆಗೆ ಪ್ರಮಾಣೀಕೃತ ಕಚೇರಿ ಪ್ರಕ್ರಿಯೆಗಳನ್ನು (SOP) ಅಂತಿಮಗೊಳಿಸಲಾಗುವುದು? | AJSK- KUTUMBA ಸಂಯೋಜನೆ ವಿನಂತಿ ಅರ್ಜಿಯ ನಮೂನೆ (Integration Request Form) ಪ್ರಕಾರ, ಆದಾಯ ಪ್ರಮಾಣ ಪತ್ರವನ್ನು ನೀಡುವ ವೇಳೆ ಅರ್ಜಿದಾರನ ಆದಾಯವನ್ನು ವಿಶ್ಲೇಷಿಸಿ ಕ್ರಮವಹಿಸಲಾಗುತ್ತಿದ್ದು, ಆದಾಯ ಪ್ರಮಾಣ ಪತ್ರ ಸಹಿತ ಎಲ್ಲಾ ಪ್ರಮಾಣ ಪತ್ರಗಳ ವಿತರಣೆಗೆ ಪ್ರಮಾಣೀಕೃತ ಕಚೇರಿ ಪ್ರಕ್ರಿಯೆಗಳನ್ನು (SOP) Administrative Reforms Committee-2 (ARC-2) ಹಾಗೂ Business Process Reengineering (BPR) ರಲ್ಲಿನ Recommendation ಗಳನ್ವಯ ಅಂತಿಮಗೊಳಿಸಲಾಗುತ್ತಿದೆ. |

**ಸಂಖ್ಯೆ: ಕಂಇ 21 ಎಜೆಎಸ್ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅನುಬಂಧ LCQ-686

| AJSK - Income Certificate Raised and Diposed Transaction Report From Jan 2022 TO Dec 2024 | | | | | |
|---|---|---|---|---|---|
| SI.NO | District | RAISED | APPROVED | REJECTED | DISPOSED |
| 1 | Bagalkot | 245508 | 241061 | 4446 | 245507 |
| 2 | Ballari | 309283 | 303490 | 5725 | 309215 |
| 3 | Bangalore Rural | 117867 | 109850 | 7987 | 117837 |
| 4 | Belagavi | 604462 | 591845 | 12594 | 604439 |
| 5 | Bengaluru | 626865 | 576459 | 50264 | 626723 |
| 6 | Bidar | 300887 | 282377 | 18414 | 300791 |
| 7 | Chamarajanagar | 174937 | 166520 | 8362 | 174882 |
| 8 | Chikballapur | 194531 | 186961 | 7558 | 194519 |
| 9 | Chikkamagaluru | 146168 | 140890 | 5260 | 146150 |
| 10 | Chitradurga | 319118 | 300533 | 18554 | 319087 |
| 11 | Dakshina Kannada | 119378 | 117408 | 1967 | 119375 |
| 12 | Davanagere | 240871 | 230823 | 9992 | 240815 |
| 13 | Dharwad | 181270 | 177279 | 3974 | 181253 |
| 14 | Gadag | 126897 | 123782 | 3115 | 126897 |
| 15 | Hassan | 178730 | 170342 | 8351 | 178693 |
| 16 | Haveri | 202890 | 197591 | 5276 | 202867 |
| 17 | Kalaburagi | 488393 | 473533 | 14764 | 488297 |
| 18 | Kodagu | 68222 | 65976 | 2225 | 68201 |
| 19 | Kolar | 238929 | 225840 | 13066 | 238906 |
| 20 | Koppal | 225135 | 219609 | 5509 | 225118 |
| 21 | Mandya | 140722 | 136224 | 4479 | 140703 |
| 22 | Mysuru | 363858 | 343023 | 20697 | 363720 |
| 23 | Raichur | 414506 | 402097 | 12390 | 414487 |
| 24 | Ramanagara | 114457 | 108930 | 5455 | 114385 |
| 25 | Shivamogga | 222409 | 209856 | 12465 | 222321 |
| 26 | Tumakuru | 348265 | 333620 | 14621 | 348241 |
| 27 | Udupi | 95244 | 93098 | 2143 | 95241 |
| 28 | Uttara Kannada | 242258 | 234036 | 8213 | 242249 |
| 29 | Vijayanagara | 276445 | 269535 | 6821 | 276356 |
| 30 | Vijayapura | 350035 | 344267 | 5757 | 350024 |
| 31 | Yadgir | 283657 | 278194 | 5445 | 283639 |
| TOTAL | | **7962197** | **7655049** | **305889** | **7960938** |

Digitally signed by
SUNIL KUMAR P
Date: 10-03-2025
ಹೆಚ್ಚುವರಿ ಆಯುಕ್ತರು
ಕಂದಾಯ ಆಯುಕ್ತಾಲಯ,
ಬೆಂಗಳೂರು